ಬೆಳೆಯುವ ಬೆಳೆಯಲ್ಲಿ ವಿಪರೀತ ನಷ್ಟ ಸಂಭವಿಸಿದೆ; ಪುತ್ತೂರು ತಾಲ್ಲೂಕಿಗೆ ಹೊಂದಿಕೊಂಡ ಪ್ರದೇಶದಲ್ಲಿ ಮಳೆಯ ಪ್ರಮಾಣ ತುಂಬಾ ಕಡಿಮೆಯಾಗಿದ್ದು ಭತ್ತದ ಬೆಳೆಯಲ್ಲೂ ಹಾನಿಯಾಗಿದೆ. ಸರಿಯಾಗಿ ನಾಟಿಯ ಸಂದರ್ಭದಲ್ಲಿ ಮಳೆ ಬರದೇ ಬಿಟ್ಟು, ಮೊಳಕೆ ಬಂದ್ದೆಗಳು ಸಾಧ್ಯವಾಗಿ ಆಗದೇ ಇರುವುದರಿಂದ ಇದಕ್ಕೆ ಸಂಬಂಧಪಟ್ಟ ಕೃಷಿ ಅಧಿಕಾರಿಗಳು ಹಾಗೂ ಇತರ ತಾಲ್ಲೂಕು ಮಟ್ಟದ ಅಧಿಕಾರಿಗಳು, ಜನರ ಪ್ರತಿನಿಧಿಗಳು ಒಂದು ಸಭೆಯನ್ನು ನಡೆಸಿ ಜಿಲ್ಲಾ ಪರಿಷತ್ತಿಗೆ ಹಾಗೂ ಸರ್ಕಾರಕ್ಕೆ ತಾಲೂಕು ಪಂಚಾಯಿತಿ ಸಮಿತಿ ಮುಖಾಂತರ ಕಳುಹಿಸಿ ಕೊಟ್ಟಿರುತ್ತೇವೆ. ತಾತ್ಕಾಲಿಕವಾಗಿ ಮಳೆಯ ಅಭಾವಕ್ಕೆ ಒಳಗಾಗಿರುವ ರೈತರಿಗೆ ೧೨ ಲಕ್ಷ ರೂಪಾಯಿಗಳ ತಾತ್ಕಾಲಿಕ ಪರಿಹಾರಕ್ಕೆ ಸರಕಾರವನ್ನು ಕೇಳಿಕೊಂಡಿರುತ್ತೇವೆ. ರೈತರಿಗೆ ಸದ್ಯ ಇರುವಂತಹ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸುವುದು, ರೈತರಿಗೆ ಮರು ಬಿತ್ತನೆಗೆ ಬೀಜ, ರಾಸಾಯನಿಕ ಗೊಬ್ಬರ ಹಾಗೂ ಕಾಡಿಯುವ ನೀರು, ಮೇವಿನ ಮಟ್ಟಿಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ತಮ್ಮ ಮುಖಾಂತರ ಸರಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸುವ ಬಗ್ಗೆ ಪರಿಶೀಲಿಸಿ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಜಿಲ್ಲಾ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ಗಳಿಗೆ ಸೂಚನೆಯನ್ನು ಕೊಡುತ್ತೇನೆ.

೧೫) ಘಟಪ್ರಭಾ ಬಲದಂಡೆ ಕಾಲುವೆಯ ನಿರ್ಮಾಣದ ಬಗ್ಗೆ ವಿವರಗಳನ್ನು ತಿಳಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ರಾಜ್ಯ ಸರಕಾರ ಘಟಪ್ರಭಾ ಬಲದಂಡೆ ಕಾಲುವೆ ನಿರ್ಮಾಣಕ್ಕೆ ಅಗತ್ಯವಾದ ಹಣ ಒದಗಿಸದೆ ಸತ್ಯಕ್ಕೆ ದೂರವಾದ ಅಂಕಿ ಅಂಶಗಳನ್ನು ನೀಡುತ್ತಿದ್ದು ನಿರ್ಮಾಣ ಕಾರ್ಯದ ಬಗ್ಗೆ ನಿರ್ಲಕ್ಷ್ಯ ಧೋರಣೆ ತಾಳಿದೆ ಎಂಬುದಾಗಿ ಬೆಟಗೇರಿ ಸತ್ಯಾಗ್ರಹಿಗಳ ಸಂಘಟಿಕರು ಅಪಾದಿಸಿದ್ದು, ಈ ಸಂದರ್ಭದಲ್ಲಿ ನಿರ್ಮಾಣ ಕಾರ್ಯವನ್ನು ಒತ್ತಾಯಿಸುವ ಸಲುವಾಗಿ ಸೆಪ್ಟೆಂಬರ್ ೧೧ರಂದು ಗೋಕಾಕ್ ತಾಲೂಕಿನ ತಹಸೀಲ್ದಾರರ ಕಚೇರಿ ಎದುರು ಧೋರಾವೋ ನಡೆಸಲು ತೀರ್ಮಾನಿಸಿರುವುದಾಗಿ ವರದಿಯಾಗಿದೆ. ಈ ಧೋರಾವೋ ಕಾರ್ಯಕ್ರಮದಲ್ಲಿ ಈ ತಾಲ್ಲೂಕಿನ ಪೂರ್ವಭಾಗದ ಎಲ್ಲಾ ಗ್ರಾಮಗಳ ಸುಮಾರು ೧೧ ಸಾವಿರ ಮಂದಿ ಭಾಗವಹಿಸುವುದಾಗಿಯೂ ವರದಿಯಾಗಿದೆ. ಮೇಲ್ಕಂಡ ಅಹಿತಕರ ಘಟನೆ ನಡೆಯುವುದನ್ನು ತಡೆಗಟ್ಟಲು ಸರಕಾರ ಕೂಡಲೇ ಕ್ರಮ ಕೈಗೊಂಡು ಘಟಪ್ರಭಾ ಬಲದಂಡೆ ಕಾಲುವೆಯ ನಿರ್ಮಾಣದ ಬಗ್ಗೆ ನಿಜಾಂಶವನ್ನು ಜನತೆಗೆ ತಿಳಿಸುವುದಲ್ಲದೆ ಕೂಡಲೇ ನಿರ್ಮಾಣ ಕಾರ್ಯದ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಗೆ ಈ ವಿಷಯವನ್ನು ತಿಳಿಸಿ ಇದಕ್ಕೆ ಸೂಕ್ತ ಪರಿಹಾರವನ್ನು ಕೊಡಬೇಕೆಂದು ಹೇಳುತ್ತೇನೆ.

೧೬) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒತ್ತುವರಿಮಾಡಿರುವ ಸರಕಾರಿ ಜಮೀನನ್ನು ಪಾಯಂಗೊಳಿಸುವುದು

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಾದ್ಯಂತ ಅದರಲ್ಲೂ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬೆಳ್ತಂಗಡಿ, ಬಂಟ್ವಾಳ ತಾಲೂಕುಗಳಲ್ಲಿ ಕಳೆದ ಕೆಲವು ವರ್ಷಗಳಿಂದ ಸರಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಬರುತ್ತಿದ್ದು ಸರಿಸುಮಾರು ಒತ್ತುವರಿದಾರರು ಒತ್ತುವರಿ ಸ್ಥಳವನ್ನು ಪಾಯಂ ಮಾಡುತ್ತೇವೆ ಎಂದು ಸರಕಾರ ಕಳೆದ ೪ ವರ್ಷಗಳಿಂದ ಹೇಳುತ್ತಾ ಬಂದರೂ, ಈ ತನಕ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಇದಕ್ಕಾಗಿ ಒಂದು ಸಮಿತಿಯನ್ನು ಕೂಡ ರಚಿಸಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರೂ ಕ್ರಮ ತೆಗೆದುಕೊಂಡಿದ್ದು ಕಂಡುಬರುವುದಿಲ್ಲ. ಈ ಸಮಿತಿಯ ವರದಿ ಯಾವ ಹಂತದಲ್ಲಿದೆ? ಒತ್ತುವರಿದಾರರನ್ನು ಪಾಯಂ ಬಗ್ಗೆ ಸರಕಾರ ಯಾವ ನೀತಿಯನ್ನು ಅನುಸರಿಸಿದೆ ಎಂದು ತಿಳಿಯಬಯಸುತ್ತೇನೆ